**ದಿನಾಂಕಃ 15.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ.ಪಿ.ಎಂ. ವಕೀಲರಿಂದಃ**

ಸಾಕ್ಷಿಯು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣಾ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ತಮಗೆ ತಿಳಿದಿದೆ ಮತ್ತು ಸತ್ಯವಾಗಿದೆ ಎಂದು ಹೇಳಿ, ಪ್ರಮಾಣ ಪತ್ರದಲ್ಲಿನ ಸಹಿ ತಮ್ಮದೆಂದು ಗುರುತಿಸಿರುತ್ತಾರೆ.

ನಾನು ಈ ದಿನ ನನ್ನ ಪರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

1) ದಿಃ03.03.1994 ರ ಶುದ್ಧ ಕ್ರಯ ಪತ್ರವನ್ನು ನಿಪಿ.1 ಎಂದು,

2) ಒಂದು ಕೈಬರಹದ ಇಸಿ ಅನ್ನು ನಿಪಿ.2 ಎಂದು,

3) ಇಸಿ ಯನ್ನು ನಿಪಿ.3 ಎಂದು,

4) 30 ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲನ್ನು ನಿಪಿ.4 ರಿಂದ 33 ಎಂದು,

5) ದಿಃ30.11.1993 ಮತ್ತು 29.11.1993 ರ ಎರಡು ಅಧಿಕೃತ ಜ್ಞಾಪನ ಪತ್ರಗಳನ್ನು ನಿಪಿ.34 ಮತ್ತು 35 ಎಂದು

6) ನಗರಸಭೆ, ಚನ್ನಪಟ್ಟಣ ರವರು ನೀಡಿರುವ ಸ್ವೀಕೃತಿಯನ್ನು ನಿಪಿ.36 ಎಂದು, ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**